# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-6477/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 22/02/2017
23

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ವೆಂಕಟೇಶ್ ರಾಮಣ್ಣ ಪ್ರಭು, ಬಂಟಕಲ್ಲು, ಶಿರ್ವ, ಕೋರ್ಟ್ ರೋಡ್, ಉಡುಪಿ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ವೆಂಕಟೇಶ್ ರಾಮಣ್ಣ ಪ್ರಭು ಇವರು ಉಡುಪಿಯ ದೂರು ಸ್ವೀಕಾರ ಕ್ಯಾಂಪ್‌ನಲ್ಲಿ ದಿ:05/06/2014 ರಂದು ದೂರು ಸಲ್ಲಿಸಿ, ತಾನು ಉಡುಪಿ ಜಿಲ್ಲೆ, ಉಡುಪಿ ತಾಲ್ಲೂಕಿನ ಶಿರ್ವ ಗ್ರಾಮದ ಬಂಟಕಲ್ಲು ಎಂಬಲ್ಲಿ ವಾಸವಾಗಿದ್ದು, ತನ್ನ ಮನೆ ಮುಂದೆ ಬಸ್ ಸ್ಟ್ಯಾಂಡ್ ಬದಿಯಲ್ಲಿ ರಿಕ್ಷಾ ಚಾಲಕರ ಹಾಗೂ ಮಾಲೀಕರ ಸಂಘದವರು ತಮ್ಮ ಆಫೀಸಿನ ಕಟ್ಟಡದ ಉದ್ದೇಶಕ್ಕೆ ರಸ್ತೆ ಬದಿಯ ಜಾಗವನ್ನು ಅನಧಿಕೃತವಾಗಿ ಉಪಯೋಗಿಸಿಕೊಂಡು ಕಟ್ಟಡವನ್ನು ಕಟ್ಟಿರುತ್ತಾರೆ. ಈ ಬಗ್ಗೆ ತಾನು ಶಿರ್ವ ಗ್ರಾಮ ಪಂಚಾಯತಿ, ಪಿಡಬ್ಲ್ಯೂಡಿ, ತಹಶೀಲ್ದಾರ್ ಕಛೇರಿಗೆ, ಸಹಾಯಕ ಕಮೀಷನರ್‌ರವರ ಕಛೇರಿಗೆ ಹಾಗೂ ಜಿಲ್ಲಾಧಿಕಾರಿಯವರ ಕಛೇರಿಗೆ ದೂರು ನೀಡಿದ್ದು, ಈ ಬಗ್ಗೆ ಶಿರ್ವ ಗ್ರಾಮ ಪಂಚಾಯತಿ ಮತ್ತು ಪಿಡಬ್ಲ್ಯೂಡಿ ಇಲಾಖೆಯಿಂದ ಸದರಿ ಅನಧಿಕೃತ ಕಟ್ಟಡ ತೆರವುಗೊಳಿಸಲು ಆದೇಶವಾಗಿರುತ್ತದೆ. ಆದರೂ ಸಹ ಸ್ಥಳೀಯ ಗ್ರಾಮ ಪಂಚಾಯತಿ ಸದಸ್ಯರಾದ ಶ್ರೀ ಕೆ. ರಾಮರಾಯ ಪಾಟ್ಕರ್ ರವರ ಬೆಂಬಲದಿಂದ ರಿಕ್ಷಾ ಚಾಲಕ ಮಾಲೀಕ ಸಂಘದವರು ಸದರಿ ಕಟ್ಟಡವನ್ನು ತೆರವುಗೊಳಿಸಲು ತಡೆಯೊಡ್ಡಿದ್ದಾರೆ. ಸದರಿ ಕಟ್ಟಡದಿಂದ ತನಗೆ ತೊಂದರೆಯಾಗಿರುತ್ತದೆ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಿ ತನಗೆ ಸೂಕ್ತ ಪರಿಹಾರ ಕೊಡಿಸಿಕೊಡಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಗೌರವಾನ್ವಿತ ಉಪಲೋಕಾಯುಕ್ತರು ದೂರುದಾರರು ಮಾಡಿರುವ ಆರೋಪದಂತೆ ಅನಧೀಕೃತ ಕಟ್ಟಡ ನಿರ್ಮಾಣವಾಗಿದ್ದರೆ, ಸದರಿ ಕಟ್ಟಡ ತೆರವುಗೊಳಿಸಿ ಸಂಬಂಧಪಟ್ಟವರ ಮೇಲೆ ಕಾನೂನು ಕ್ರಮ ಕೈಗೊಂಡು ವರದಿ ಸಲ್ಲಿಸುವಂತೆ ಪಂಚಾಯತಿ ಅಭಿವೃದ್ಧಿ

ಅಧಿಕಾರಿ, ಶಿರ್ವ ಗ್ರಾಮ ಪಂಚಾಯತಿ ಇವರಿಗೆ ತಿಳಿಸಿ ಆದೇಶ ನೀಡಿದ್ದರು. ಅದರಂತೆ, ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುಂದರ ಪ್ರಭುರವರು ವರದಿಯನ್ನು ಸಲ್ಲಿಸದ ಕಾರಣ, ನೆನಪೋಲೆಗಳನ್ನು ನೀಡಲಾಗಿತ್ತು. ನಂತರ ದಿ:13/11/2014 ರಂದು ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ಅದರಲ್ಲಿ ಉಡುಪಿ ತಾಲ್ಲೂಕು, ಶಿರ್ವ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸೇರಿದ ಶಿರ್ವ ಬಂಟಕಲ್ಲು ಎಂಬಲ್ಲಿ ಬಸ್ಸು ತಂಗುದಾಣದ ಬದಿಯಲ್ಲಿ ರಿಕ್ಷಾ ಮಾಲೀಕರು ಹಾಗೂ ಚಾಲಕರ ಸಂಘ, ಬಂಟಕಲ್ಲು ಸಂಸ್ಥೆಯವರು ಅವರ ಸಂಘದ ಕಛೇರಿಗೆ ತಾತ್ಕಾಲಿಕವಾಗಿ ಸಿಮೆಂಟ್ ಶೀಟ್ ಹಾಕಿ ಒಂದು ಕೋಣೆಯನ್ನು ರಚಿಸಿರುತ್ತಾರೆ. ಸದರಿ ಸ್ಥಳ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಸದರಿ ಲೋಕೋಪಯೋಗಿ ರಸ್ತೆ ಅಭಿವೃದ್ಧಿಪಡಿಸುವಾಗ ಅಥವಾ ಸಾರ್ವಜನಿಕರಿಂದ ಯಾವುದೆ ಆಕ್ಷೇಪಣೆ ಬಂದಲ್ಲಿ ಅದನ್ನು ತೆರವುಗೊಳಿಸುವುದಾಗಿ ಗ್ರಾಮ ಪಂಚಾಯತಿಗೆ ಕರಾರು ಪತ್ರ (ಮುಚ್ಚಳಿಕೆ) ನೀಡಿ ತಾತ್ಕಾಲಿಕವಾಗಿ ಶೆಡ್ ಅನ್ನು ರಚಿಸಿರುತ್ತಾರೆ. ಸದರಿ ಕೋಣೆಯ ಹಿಂಬದಿ ಯಾವುದೇ ವಾಸದ ಮನೆ ಕಟ್ಟಡಗಳು ಇರುವುದಿಲ್ಲ. ಬಸ್ಸು ತಂಗುದಾಣಢಎಡ ಬದಿಯಲ್ಲಿರುವ ಮನೆ ಕಟ್ಟಡದ ಮಾಲೀಕರ ಅಥವಾ ಯಾವುದೇ ಗ್ರಾಮಸ್ಥರ ದೂರು ಅರ್ಜಿ ಬಂದಿರುವುದಿಲ್ಲ. ಆದರೆ, ಶ್ರೀ ವೆಂಕಟೇಶ್ ರಾಮಣ್ಣ ಪ್ರಭುರವರು ನೀಡಲಾದ ದೂರಿನ ಮೇರೆಗೆ ಸದರಿ ಕೋಣೆಯನ್ನು ತೆರವುಗೊಳಿಸಲು ರಿಕ್ಷಾ ಮಾಲೀಕ/ಚಾಲಕ ಸಂಘದವರಿಗೆ ನೋಟೀಸ್ ನೀಡಲಾಗಿರುತ್ತದೆ. ಈ ಬಗ್ಗೆ ಲೋಕೋಪಯೋಗಿ ಇಲಾಖೆಯವರು ರಸ್ತೆ ಅಭಿವೃದ್ಧಿ ಪಡಿಸುವಾಗ ಅಥವಾ ಸಾರ್ವಜನಿಕರಿಗೆ ಯಾವುದೇ ತೊಂದರೆ ಬಂದಲ್ಲಿ ಸದರಿ ತಾತ್ಕಾಲಿಕವಾಗಿ ರಚಿಸಲಾದ ಶೀಟಿನ ಕಟ್ಟಡವನ್ನು ಕೂಡಲೇ ತೆರವುಗೊಳಿಸುವುದಾಗಿ ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿಯವರು ಗ್ರಾಮ ಪಂಚಾಯತಿಗೆ ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರಿಗೆ ಲಿಖಿತವಾಗಿ ಬರೆದುಕೊಟ್ಟಿರುತ್ತಾರೆ. ಕಟ್ಟಡವನ್ನು ತೆರವುಗೊಳಿಸುವ ಬಗ್ಗೆ ಗ್ರಾಮ ಪಂಚಾಯತಿಯಲ್ಲಿ ನಿರ್ಣಯ ಕೈಗೊಂಡು ಸದರಿ ವಿಷಯವನ್ನು ಲೋಕೋಪಯೋಗಿ ಇಲಾಖೆಗೆ ಪತ್ರ ಮುಖೇನ ತಿಳಿಸಲಾಗಿರುತ್ತದೆ. ನಿರ್ಮಿಸಲಾದ ಶೆಡ್‌ನ ಪೋಟೋವನ್ನು ಸಹ ತಮ್ಮ ಪತ್ರದೊಡನೆ ಅಡಕ ಮಾಡಿರುತ್ತಾರೆ. ಸದರಿ ಕಟ್ಟಡವನ್ನು ತೆರವುಗೊಳಿಸುವ ಬಗ್ಗೆ ಗ್ರಾಮ ಪಂಚಾಯತಿಯಲ್ಲಿ ನಿರ್ಣಯ ಕೈಗೊಂಡು ಲೋಕೋಪಯೋಗಿ ಇಲಾಖೆಗೆ ಬರೆದುಕೊಳ್ಳಲಾಗಿರುತ್ತದೆಂದು ತಿಳಿಸಿರುತ್ತಾರೆ.

3. ಸದರಿ ವರದಿಯ ಆಧಾರದ ಮೇಲೆ ದೂರುದಾರರ ಪ್ರತ್ಯುತ್ತರವನ್ನು ಪಡೆಯಲಾಗಿದ್ದು, ರಿಕ್ಷಾ ಚಾಲಕರ/ಮಾಲೀಕರ ಸಂಘದ ಅನಧೀಕೃತ ಕಟ್ಟಡವು ದೂರುದಾರರಿಗೆ ಸೇರಿದ ಜಾಗ ಸರ್ವೆ ನಂಬರ್ 10/1ಬಿ ಯ ಎದುರುಗಡೆ ಇರುತ್ತದೆ. ಆ ಜಾಗವನ್ನು ತಮ್ಮ ತಂದೆ 1960 ರಲ್ಲಿ ಶ್ರೀ ಶಿವರಾಮ ನಾಯ್ಕ ರವರಿಂದ ಖರೀದಿಸಿರುತ್ತಾರೆ. ತಂದೆಯ ನಿಧನ ನಂತರ ಅವರ ವಾರಸುದಾರರಾದ ತಾನು ಮತ್ತು ತನ್ನ

ಸಹೋದರ ಶ್ರೀ ಗಣೇಶ್ ರಾಮಣ್ಣಪ್ರಭು ಮತ್ತು ಸಹೋದರಿಯರಾದ ಶ್ರೀಮತಿ ಸರಸ್ವತಿ ಆರ್ ಪ್ರಭು ಮತ್ತು ಶ್ರೀಮತಿ ಲೀಲಾವತಿ ಆರ್ ಪ್ರಭು ಇವರಿಬ್ಬರೂ ಸದರಿ ಆಸ್ತಿಯನ್ನು ಸಮನಾಗಿ ಅನುಭವಿಸಿಕೊಂಡು ಬಂದಿರುತ್ತಾರೆ. ಸದರಿ ಜಾಗದಲ್ಲಿ ಈಗ ಶ್ರೀದೇವಣ್ಣ ಪ್ರಭು ಮತ್ತು ಮಕ್ಕಳು ವಾಸವಿರುತ್ತಾರೆ ಹೊರತು ಆ ಜಾಗದಲ್ಲಿ ಮಾಲೀಕರ್ಯಾರು ಇರುವುದಿಲ್ಲ. ರಿಕ್ಷಾ ಚಾಲನ/ಮಾಲೀಕ ಸಂಘದವರು ಸ್ಥಳೀಯ ಪಂಚಾಯತ್ ಸದಸ್ಯರಾದ ಶ್ರೀ ರಾಮರಾಯ ಪಾಟ್ಕರ್ ಇವರ ಬೆಂಬಲದಿಂದ ಜನಪ್ರತಿನಿಧಿಗಳಿಗೆ ಹಾಗೂ ಅಧಿಕಾರಿಗಳಿಗೆ ತಪ್ಪು ಮಾಹಿತಿಯನ್ನು ನೀಡಿರುತ್ತಾರೆ. ಶಿರ್ವ ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ದಿ:12/08/2010 ರಂದು ವಿಷಯ 7 ರಡಿಯಲ್ಲಿ ರಿಕ್ಷಾ/ಮಾಲೀಕ ಸಂಘದವರು ನಿರ್ಮಿಸಿರುವ ತಗಡು ಶೀಟಿನ ಬಗ್ಗೆ ಸರ್ವಾನುಮತದಿಂದ ನಿರ್ಣಯ ತೆಗದುಕೊಳ್ಳಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆದರೆ, ಶಿರ್ವ ಗ್ರಾಮಪಂಚಾಯತ್‌ನಲ್ಲಿ ಈ ಬಗ್ಗೆ ರಿಕ್ಷಾ/ಚಾಲಕ ಮಾಲೀಕ ಸಂಘದವರು ನೀಡಿರುವ ಅರ್ಜಿಯ ಮಾಹಿತಿ ಲಭ್ಯವಿರುವುದಿಲ್ಲ. ಇದಲ್ಲದೇ, ರಿಕ್ಷಾ/ಚಾಲಕ ಮಾಲೀಕ ಸಂಘದವರು ಬರೆದುಕೊಟ್ಟಿರುವ ರೂ.50/– ಮೌಲ್ಯದ ಸ್ಟ್ಯಾಂಪ್ ಪೇಪರ್ ನಲ್ಲಿ ಬರೆದುಕೊಟ್ಟಿರುವರೆಂದು ಹೇಳಿರುವ ಅಫಿಡೆವಿಟ್ ನೋಟರಿಯಿಂದ ದೃಢೀಕೃತವಾಗಿರುವುದಿಲ್ಲ. ಲೋಕೋಪಯೋಗಿ ಇಲಾಖೆಯವರು ಸಹ ಕಟ್ಟಡ ತೆರವುಗೊಳಿಸಲು ಆದೇಶ ಸಂ: 537 ದಿ:28/08/2013 ರಂತೆ ಆದೇಶಿಸಿರುತ್ತಾರೆ. ಗ್ರಾಮ ಪಂಚಾಯತಿಯಲ್ಲಿಯೂ ಸಹ ಅಕ್ರಮ ಕಟ್ಟಡ ತೆರವುಗೊಳಿಸಲು ದಿ:31/08/2013ರಂದು ಕಟ್ಟಡವನ್ನು ತೆರವುಗೊಳಿಸುವ ನಿರ್ಣಯ ತೆಗೆದುಕೊಳ್ಳಲಾಗಿರುತ್ತದೆ. ಆದರೂ ಕೂಡ ಇದುವರೆಗೂ ಅಕ್ರಮ ಕಟ್ಟಡವನ್ನು ತೆರವುಗೊಳಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

4. ದೂರಿನಂಶಗಳನ್ನು ಎದುರುದಾರರ ವರದಿಯನ್ನು ಹಾಗೂ ಪ್ರಕಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಹಾಜರುಪಡಿಸಿರುವ ಪೋಟೋ ಪರಿಶೀಲಿಸಿದಲ್ಲಿ ಸದರಿ ರಿಕ್ಷಾ ಚಾಲಕ/ಮಾಲೀಕರ ಸಂಘದ ಕಟ್ಟಡವನ್ನು ರಸ್ತೆಯ ಬದಿಯಲ್ಲಿಯೇ ಕಟ್ಟಿರುವುದಾಗಿ ಕಂಡು ಬರುತ್ತದೆ. ಸದರಿ ಪೋಟೋಗಳನ್ನು ಹಾಜರುಪಡಿಸಲಾಗಿದೆ. ಸದರಿ ಕಟ್ಟಡವು ಅನಧೀಕೃತ ಕಟ್ಟಡವೆಂದು ಶಿರ್ವ ಗ್ರಾಮ ಪಂಚಾಯತಿಯವರು ತೀರ್ಮಾನಿಸಿರುತ್ತಾರೆ. ಹಾಗೆಯೇ ಪಿಡಬ್ಲ್ಯೂಡಿ ಇಲಾಖೆಯವರು ಸಹ ಸದರಿ ಕಟ್ಟಡವು ಅನಧೀಕೃತ ಕಟ್ಟಡವೆಂದು ತಿಳಿಸಿರುತ್ತಾರೆ. ಹೀಗಿದ್ದರೂ ಸಹ ಸದರಿ ಅನಧೀಕೃತ ಕಟ್ಟಡವನ್ನು ಎದುರುದಾರರು ತೆರವುಗೊಳಿಸದೇ ವಿನ: ಕಾರಣವಿಳಂಭ ನೀತಿ ಅನುಸರಿಸುತ್ತಿರುವುದು ಕಂಡು ಬರುತ್ತದೆ. ರಿಕ್ಷಾ ಚಾಲಕ/ಮಾಲೀಕರ ಸಂಘದವರು ಪಂಚಾಯತಿಗೆ ಒಂದು ಮುಚ್ಚಳಿಕೆ ಬರೆದುಕೊಟ್ಟಿರುವುದರಿಂದ, ಸದರಿ ಅಕ್ರಮ ಕಟ್ಟಡವನ್ನು ತೆರವುಗೊಳಿಸಿಲ್ಲವೆಂದು 1ನೇ ಎದುರುದಾರರು ತಿಳಿಸಿರುತ್ತಾರೆ. ದಿ:20/04/2015 ರಂದು ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಬರೆದಿರುವ ಪತ್ರದ

ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ಪತ್ರದಲ್ಲಿ ಸದರಿ ರಿಕ್ಷಾ ಚಾಲಕ/ಮಾಲೀಕರ ಸಂಘದ ಕಟ್ಟಡವನ್ನು ಕಟ್ಟಲು ಶಿರ್ವ ಗ್ರಾಮ ಪಂಚಾಯತಿಯಿಂದಾಗಲೀ ಅಥವಾ ಲೋಕೋಪಯೋಗಿ ಇಲಾಖೆಯವರಿಂದಾಗಲೀ ಅನುಮತಿ/ನಿರಾಕ್ಷೇಪಣಾ ಪತ್ರವನ್ನು ಪಡೆದುಕೊಂಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಶಿರ್ವ ಗ್ರಾಮ ಪಂಚಾಯತಿಯಲ್ಲಿ ಅನಧೀಕೃತವಾಗಿ ಕಟ್ಟಿರುವ ರಿಕ್ಷಾ ಚಾಲಕ/ಮಾಲೀಕರ ಸಂಘದ ಕಟ್ಟಡವನ್ನು ತೆರವುಗೊಳಿಸಲು ಪಂಚಾಯತಿಯವರು ತೆಗೆದುಕೊಂಡ ನಿರ್ಣಯದ ಬಗ್ಗೆ ಮಾಹಿತಿಯನ್ನು ದೂರುದಾರರಿಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಮಾಹಿತಿ ಹಕ್ಕು ಅಧಿನಿಯಮದಡಿ ನೀಡಿದ್ದು, ಸದರಿ ಮಾಹಿತಿಯನ್ನು ಹಾಜರುಪಡಿಸಲಾಗಿದೆ.

5. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ರಿಕ್ಷಾ ಚಾಲಕ/ಮಾಲೀಕರ ಸಂಘದವರು ಅನಧೀಕೃತವಾಗಿ ಕಟ್ಟಡವನ್ನು ರಸ್ತೆ ಬದಿಯಲ್ಲಿ ಸರ್ವೇ ನಂ.10 ರಲ್ಲಿ ಕಟ್ಟಿರುತ್ತಾರೆಂದು ಸ್ಪಷ್ಟ ಪಡುತ್ತದೆ. ಪಂಚಾಯತಿಯಲ್ಲಿ ಹಾಗೂ ಪಿಡಬ್ಲ್ಯೂಡಿ ಇಲಾಖೆಯವರು ನಿರ್ಣಯಿಸಿದಂತೆ ಸದರಿ ಸಂಘದ ಕಟ್ಟಡವು ಅನಧೀಕೃತವಾಗಿದ್ದು, ಅದನ್ನು ತೆರವುಗೊಳಿಸಬೇಕಾಗಿರುತ್ತದೆ.

6. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಉಡುಪಿ ಜಿಲ್ಲೆ, ಉಡುಪಿ ತಾಲ್ಲೂಕಿನ ಶಿರ್ವ ಗ್ರಾಮ ಪಂಚಾಯತ್ ವ್ಯಾಪ್ತಿಯ ಶಿರ್ವ ಗ್ರಾಮದ ಬಂಟಕಲ್ಲು ಎಂಬಲ್ಲಿ ಬಸ್ಸು ತಂಗುದಾಣದ ಬಳಿಯಲ್ಲಿ ರಿಕ್ಷಾ ಚಾಲಕರ ಹಾಗೂ ಮಾಲೀಕರ ಸಂಘದವರು ತಮ್ಮ ಕಛೇರಿಯ ಉದ್ದೇಶಕ್ಕೆ ನಿರ್ಮಿಸಿರುವ ಅನಧೀಕೃತ ಕಟ್ಟಡವನ್ನು ತೆರವುಗೊಳಿಸುವ ಬಗ್ಗೆ ಕಾನೂನು ರೀತ್ಯ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 22/12/17.

**(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**